# ಐಫೋನ್ 12
## ಇರಲಿ ಸುರಕ್ಷತೆಗೆ ಆದ್ಯತೆ



■ ಶಶಿಕುಮಾರ್ ಸಿ.

ಐಫೋನ್ ಮತ್ತು ಸ್ಮಾರ್ಟ್‌ಫೋನ್ ಬಳಕೆದಾರರು ಬಹುಮುಖ್ಯವಾಗಿ ಜಾಗ್ರತೆ ವಹಿಸಬೇಕಿರುವುದು ಆನ್‌ಲೈನ್ ಖದೀಮರ ಬಗ್ಗೆ. 'ಮೊಬೈಲ್ ಬಳಕೆದಾರರು ಚಾಪೆ ಕೆಳಗೆ ನುಗ್ಗಿದರೆ, ಆನ್‌ಲೈನ್ ಖದೀಮರು ರಂಗೋಲಿ ಕೆಳಗೆ ನುಗ್ಗುತ್ತಾರೆ' ಎನ್ನುವಂತಹ ಭಯದ ವಾತಾವರಣ ನಿರ್ಮಾಣವಾಗಿದೆ. ಇದಕ್ಕೆ ಇತ್ತೀಚೆಗಿನ 'ಪೆಗಾಸಸ್' ಕುತಂತ್ರಾಂಶ ಒಳ್ಳೆಯ ಉದಾಹರಣೆ. ಅತ್ಯಂತ ಸುರಕ್ಷಿತ ಎಂದೆನಿಸಿಕೊಂಡಿರುವ ಐಫೋನ್‌ಗಳನ್ನೂ ಪೆಗಾಸಸ್‌ನಂತಹ ಕುತಂತ್ರಾಂಶಗಳು ಇನ್ನಿಲ್ಲದಂತೆ ಕಾಡಿ ವಂಚಿಸಿವೆ.

ಅಂದಹಾಗೆ, ಐಫೋನ್ 12 ಸರಣಿಯ ಸ್ಮಾರ್ಟ್‌ಫೋನ್ ಬಳಕೆದಾರರು ಕೆಲವೊಂದು ಬದಲಾವಣೆಗಳನ್ನು ಮಾಡಿಕೊಂಡರೆ ತಮ್ಮ ಡಾಟಾ ಹಾಗೂ ಹಣವನ್ನು ರಕ್ಷಿಸಿಕೊಳ್ಳಲು ಸಹಕಾರಿಯಾಗುತ್ತದೆ. ಆ್ಯಪಲ್ ಕಂಪನಿಯ 'ಐಫೋನ್ 12' ಕೇವಲ ಸ್ಟೇಟಸ್‌ನ ಸಿಂಬಲ್ ಮಾತ್ರವಲ್ಲ. ಅದೊಂದು ದೈನಂದಿನ ಕಾರ್ಯದ ಅನಿವಾರ್ಯ ಬಳಕೆಯ ಸಾಧನವೂ ಆಗಿದೆ. ಹೀಗಾಗಿ ಆ ಫೋನ್ ಹೊಂದಿರುವವರು ಅದರ ಸಂರಕ್ಷಣೆಗೆ ಬೇಕಾದ ಕ್ರಮಗಳನ್ನು ಕೈಗೊಳ್ಳುವುದು ಅತ್ಯಂತ ತುರ್ತಾಗಿ ಮಾಡಬೇಕಾದ ಕೆಲಸ.

ಇಂದಿನ ಸ್ಮಾರ್ಟ್‌ಯುಗದಲ್ಲಿ ಸ್ಮಾರ್ಟ್ ಫೋನ್ ದೈನಂದಿನ ಜೀವನದ ಅಂಗವಾಗಿದೆ. ಬಂಧುಮಿತ್ರರು, ಸಹೋದ್ಯೋಗಿಗಳೊಂದಿಗೆ ಸಂಪರ್ಕವಿಟ್ಟುಕೊಳ್ಳಲು ಬಳಸುವುದರ ಹೊರತಾಗಿ ಆನ್‌ಲೈನ್ ಪೇಮೆಂಟುಗಳಿಗೆ ಸಹ ಫೋನ್ ಅತ್ಯಗತ್ಯ. ಸೋಷಿಯಲ್ ಮೀಡಿಯಾ ಅಕೌಂಟುಗಳು, ಅವುಗಳ ಪಾಸ್‌ವರ್ಡುಗಳು ಹಾಗೂ ಕಚೇರಿಯ ಕೆಲಸಕ್ಕೆ ಲಾಗಿನ್ ಮಾಡಲು ಬೇಕಾದ ಡಾಟಾವೆಲ್ಲವೂ ಬಳಕೆದಾರರು ಫೋನ್‌ನಲ್ಲೇ ಶೇಖರಿಸಿಡುತ್ತಾರೆ. ಬಳಕೆದಾರರ ಸಂಪೂರ್ಣ ವೈಯಕ್ತಿಕ ಮಾಹಿತಿಯೂ ಫೋನ್‌ನಲ್ಲಿ ಇರುತ್ತದೆ. ಒಂದು ವೇಳೆ ಈ ಫೋನ್ ಕಳೆದುಹೋದಲ್ಲಿ ಅಥವಾ ಮತ್ತಾವುದೋ ಕಾರಣದಿಂದ ಫೋನ್ ನಿರುಪಯುಕ್ತವಾದರೆ ಜೀವವೇ ಕೈಗೆ ಬಂದಂತಾಗುತ್ತದೆ.



### ಡಾಟಾ ರಕ್ಷಣೆ ಹೇಗೆ?

ಫೋನ್ ಕಳೆದುಹೋದರೆ ಅದರಲ್ಲಿನ ಡಾಟಾವನ್ನು ಬ್ಯಾಕಪ್ ರೀತಿಯಲ್ಲಿ ಮರಳಿ ಪಡೆಯಲು ಅವಕಾಶವಿದೆ. ಅದಕ್ಕಾಗಿ ಬ್ಯಾಕಪ್ ಆಯ್ಕೆಯನ್ನು ಯಾವಾಗಲೂ ಆನ್‌ನಲ್ಲಿ ಇಡಬೇಕು. ಫೋನ್ ಕಳೆದುಹೋದರೆ ಅಥವಾ ಅದನ್ನು ಫ್ಯಾಕ್ಟರಿ ರಿಸೆಟ್ ಮಾಡಿದರೂ ಅದರಲ್ಲಿನ ಡಾಟಾವನ್ನು ಹುಡುಕಬಹುದಾದ ಅತ್ಯಾಧುನಿಕ ಸುರಕ್ಷತಾ ಫೀಚರ್ ಅನ್ನು ಆ್ಯಪಲ್‌ನ ಐಓಎಸ್ 15 ಆಪರೇಟಿಂಗ್ ಸಿಸ್ಟಂ ಹೊಂದಿದೆ.

ಫೋನಿನಲ್ಲಿರುವ ಸಿಮ್ ಕಾರ್ಡಿಗೆ ಪಿನ್ ಸೆಟ್ ಮಾಡುವುದು ಮೊಟ್ಟಮೊದಲ ಸುರಕ್ಷತಾ ಕ್ರಮವಾಗಿದೆ. ಫೋನ್ ಕಳುವಾದರೆ ಅದರಲ್ಲಿನ ಪೇಮೆಂಟ್ ಆ್ಯಪ್‌ಗಳ ಮೂಲಕ ನಿಮ್ಮ ಖಾತೆಯಲ್ಲಿನ ಹಣವನ್ನು ಕಳ್ಳರು ಸುಲಭವಾಗಿ ಎಗರಿಸಬಹುದು. ಹೀಗಾಗಿ ಸಿಮ್ ಕಾರ್ಡಿಗೆ ಪಿನ್ ಸೆಟ್ ಮಾಡುವುದು ಸೂಕ್ತ. ಹೀಗೆ ಮಾಡಿದರೆ ಸಿಮ್ ಅನ್ನು ಬೇರೊಂದು ಫೋನಿಗೆ ಹಾಕಿದಾಗ ಅದು ಕೆಲಸ ಮಾಡುವುದಿಲ್ಲ.

### ಟು ಫ್ಯಾಕ್ಟರ್ ಆಥೆಂಟಿಕೇಷನ್!

ಇದನ್ನು ಎರಡು ಹಂತದ ಖಾತರಿಪಡಿಸುವಿಕೆ ಎನ್ನಲಾಗುತ್ತದೆ. ಎಲ್ಲ ಆ್ಯಪ್‌ಗಳಿಗೂ ಇದನ್ನು ಸಕ್ರಿಯಗೊಳಿಸಿ. ಎಲ್ಲ ಸೋಷಿಯಲ್ ಮೀಡಿಯಾ ಅಕೌಂಟುಗಳು, ಇಮೇಲ್ ಅಕೌಂಟ್ ಹಾಗೂ ಕೆಲಸಕ್ಕೆ ಸಂಬಂಧಿಸಿದ ಎಲ್ಲ ಆ್ಯಪ್‌ಗಳಿಗೆ ಇದು ಸಕ್ರಿಯವಾಗಿರಲಿ. ಈ ಕ್ರಮದಿಂದ ಬೇರೆಯವರು ನಿಮ್ಮ ಮಾಹಿತಿಗೆ ಕನ್ನ ಹಾಕುವುದನ್ನು ತಪ್ಪಿಸಬಹುದು.

### ಫೇಸ್ ಐಡಿ ಸಕ್ರಿಯವಾಗಿರಲಿ

ಸ್ಮಾರ್ಟ್ ಫೋನ್‌ಗಳಲ್ಲಿ ಫೇಸ್ ಐಡಿ ಲಾಗಿನ್ ಆಪ್ಷನ್ ಅನ್ನು ಸಕ್ರಿಯಗೊಳಿಸಿ. ಆ್ಯಪಲ್‌ನ ಮೇಲ್ ಆ್ಯಪ್‌ನಲ್ಲಿ ಈ ಸೌಲಭ್ಯವಿಲ್ಲವಾದರೂ ಔಟಲುಕ್ ಆ್ಯಪ್‌ನಲ್ಲಿ ಇದೆ. ಗೂಗಲ್ ಡ್ರೈವ್, ವಾಟ್ಸ್‌ಆ್ಯಪ್, ಭೀಮ್ ಮುಂತಾದವುಗಳಿಗೆ ಸಹ ಫೇಸ್ ಐಡಿ ಲಾಕ್ ಮಾಡಬಹುದು. ಹೀಗಾಗಿ ಫೇಸ್ ಐಡಿ ಲಾಕ್ ಮಾತ್ರ ಸಕ್ರಿಯಗೊಳಿಸಿ.

### ಬ್ಯಾಂಕ್ ಮಾಹಿತಿ ಡಿಲಿಟ್ ಮಾಡಿ

ಬ್ಯಾಂಕ್ ಮಾಹಿತಿಗಳುಳ್ಳ ಫೋಟೊಗಳೇನಾದರೂ ಮೊಬೈಲ್ ಗ್ಯಾಲರಿಯಲ್ಲಿವೆಯಾ ಎಂದು ಪರಿಶೀಲಿಸಿ. ಪ್ಯಾನ್ ಕಾರ್ಡ್, ಆಧಾರ್ ಅಥವಾ ವೋಟರ್ ಐಡಿ ಸೇರಿದಂತೆ ಇನ್ನಿತರ ಚಿತ್ರಗಳಿದ್ದರೆ ಅವನ್ನು ಶಾಶ್ವತವಾಗಿ ಡಿಲೀಟ್ ಮಾಡಿ.

### ನೋಟ್ಸ್ ಲಾಕ್ ಮಾಡಿ

ನೋಟ್ಸ್ ಆ್ಯಪ್‌ನಲ್ಲಿ ಸೂಕ್ಷ್ಮವಾದ ಮಾಹಿತಿಗಳನ್ನು ಸೇವ್ ಮಾಡುವ ಅಭ್ಯಾಸ ನಿಮಗಿದ್ದರೆ, ತಕ್ಷಣ ಆ ಆ್ಯಪ್ ಲಾಕ್ ಮಾಡಿ. ನೋಟ್ಸ್ ಆ್ಯಪ್ ಲಾಕ್ ಮಾಡುವ ವಿಧಾನವೆಂದರೆ, ಮೊದಲು ಲಾಕ್ ಮಾಡಬಯಸುವ ನೋಟ್ಸ್ ಮೇಲೆ ಲಾಂಗ್ ಪ್ರೆಸ್ ಮಾಡಿ. ನಂತರ ತೆರೆದುಕೊಳ್ಳುವ ಆಯ್ಕೆಗಳ ಪೈಕ್ ಲಾಕ್ ಆಯ್ಕೆಯನ್ನು ಕ್ಲಿಕ್ಕಿಸಿ. ನಂತರ ಕಾಣುವ ಲಾಕ್ ನೋಟ್ ಆಯ್ಕೆಯನ್ನು ಒತ್ತಿ ಅದಕ್ಕೆ ಪ್ರತ್ಯೇಕ ಪಾಸ್‌ವರ್ಡ್ ಅನ್ನು ರಚಿಸಿ. ನಂತರ ಹಿಂಟ್ ಸೆಟ್ ಮಾಡಲು ಹಿಂಟ್ ಆಯ್ಕೆಯನ್ನು ಕ್ಲಿಕ್ಕಿಸಿ. ಬಳಿಕ ಟಾಗಲ್ ಫೇಸ್ ಐಡಿ ಬಟನ್ ಅನ್ನು ಒತ್ತಿದರೆ ಹಿಂಟ್ ಸೆಟ್ ಮಾಡಿದಂತಾಗುತ್ತದೆ.

### ನಂಬರ್ ಬರೆದಿಟ್ಟುಕೊಳ್ಳಿ!

ಫೋನಿನ ಸೀರಿಯಲ್ ನಂಬರ್ ಹಾಗೂ ಐಎಂಇಐ ನಂಬರುಗಳು ಫೋನಿನ ಬಾಕ್ಸ್ ಮೇಲೆ ಸಿಗುತ್ತವೆ. ಅವುಗಳನ್ನು ನೀವು ನೋಡಬಯಸಿದರೆ ಸೆಟ್ಟಿಂಗ್ಸ್ ಆಯ್ಕೆಯಲ್ಲಿನ ಜನರಲ್ ಆಯ್ಕೆಯನ್ನು ಕ್ಲಿಕ್ಕಿಸಿ. ನಂತರ ಅಬೌಟ್ ಆಯ್ಕೆಯನ್ನು ಒತ್ತಿದರೆ ಐಎಂಇಐ ನಂಬರ್ ಕಾಣಿಸುತ್ತದೆ. ಈ ಮಾಹಿತಿಯನ್ನು ಫೋನಿಂದ ಹೊರಗೆ ಬೇರೆ ಕಡೆ ನೋಟ್ ಮಾಡಿಟ್ಟುಕೊಳ್ಳಿ. ಒಂದೊಮ್ಮೆ ಫೋನ್ ಕಳೆದುಹೋದರೆ ಈ ಮಾಹಿತಿಯಿಂದ ಫೋನ್ ಅನ್ನು ಪೊಲೀಸರ ನೆರವಿನಿಂದ ಟ್ರ್ಯಾಕ್ ಮಾಡಿಸಬಹುದು. ■